# ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 200 ಸಿಎಸ್‌ಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 31.07.2019

ಇಂದ,

ಸರ್ಕಾರದ ಪ್ರದಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

1) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ, ಬೆಂಗಳೂರು.
2) ಆಯುಕ್ತರುಗಳು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
3) ರಾಜ್ಯದ ಎಲ್ಲಾ ಯೋಜನಾ ಪ್ರಾಧಿಕಾರಗಳಿಗೆ, ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ ಇವರ ಮುಖಾಂತರ.

**ವಿಷಯ: ರಾಜ್ಯ ಸರ್ಕಾರದ "ಜಲಾಮೃತ" ಕಾರ್ಯಕ್ರಮದಡಿ ನಗರ ವ್ಯಾಪ್ತಿಯ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.**

**ಉಲ್ಲೇಖ:**
1. **ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 200 ಸಿಎಸ್‌ಎಸ್ 2019, ದಿನಾಂಕ: 22-07-2019**
2. **ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 36 ಗುಅಪ್ರಾ 2015 ದಿನಾಂಕ 04.08.2015.**

1819

********

ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2015ರಲ್ಲಿ ಒಪ್ಪಿಗೆ ಸೂಚಿಸಿ, ಜಾರಿಗೆ ಬಂದಿರುವ ಸುಸ್ಥಿರ ಅಭಿರುದ್ಧಿ ಗುರಿಗಳ (ಗುರಿ-6: ಸ್ವಚ್ಛ ನೀರು ಹಾಗೂ ನೈರ್ಮಲ್ಯ) ಅನ್ವಯ ಸುಸ್ಥಿರ ನೀರಿನ ನಿರ್ವಹಣೆಯೊಂದಿಗೆ, ಎಲ್ಲರಿಗೂ ನೀರಿನ ವ್ಯವಸ್ಥೆಯನ್ನು 2030ರ ಒಳಗಾಗಿ ಒದಗಿಸುವ ಗುರಿ ಹೊಂದಲಾಗಿರುತ್ತದೆ. ಭಾರತ ದೇಶವು ಪ್ರಪಂಚದ ಶೇ. 17 ಜನಸಂಖ್ಯೆ ಹಾಗೂ ಶೇ. 4 ಸಿಹಿ ನೀರಿನ ಮೂಲ ಹೊಂದಿದ್ದು, ಇವುಗಳಲ್ಲಿನ ವ್ಯತ್ಯಾಸದ ನಿರ್ವಹಣೆ ಸವಾಲಾಗಿರುತ್ತದೆ. ಪ್ರಸ್ತುತ, ಭಾರತವು ನೀರು ಕ್ಲೇಶಿತ ದೇಶವಾಗಿ (Water Stressed Nation) ಗುರುತಿಸಲಾಗಿದ್ದು, ದೇಶದಲ್ಲಿ ಶೇ. 10 ರಷ್ಟು ಮಳೆ ನೀರನ್ನು ಮಾತ್ರ ಸಂಗ್ರಹಿಸಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಅಸಮಾನ ನೀರಿನ ಬಳಕೆ, ಅಪರಿಮಿತ ಅಂತರ್ಜಲದ ಬಳಕೆ, ಕಳೆದ ಕೆಲ ವರ್ಷಗಳಿಂದ ಮನ್‌ಸೂನ್ ಮಳೆ ಕೊರತೆ ಇವುಗಳಿಂದ ನೀರಿನ ಬೇಡಿಕೆ ಮತ್ತು ಬಳಕೆಯಲ್ಲಿನ ವ್ಯತ್ಯಾಸವು ನಿರ್ಣಾಯಕ

2/8/19

1/8

ಹಂತವನ್ನು ತಲುಪಿದೆ. ನೀತಿ ಆಯೋಗದ ವರದಿಯನ್ವಯ ದೇಶದ ಶೇ. 50 ರಷ್ಟು ಜನ ನೀರಿನ ಕೊರತೆಯನ್ನು ಅನುಭವಿಸುತ್ತಿರುತ್ತಾರೆ.

ಮೇಲ್ಕಂಡ ಹಿನ್ನಲೆಯಲ್ಲಿ, ನೀರಿನ ಕೊರತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ನೀರಿನ ಸಂರಕ್ಷಣೆ (Conservation), ಪುನಶ್ಚೇತನ (Restoration), ಮರುಪೂರಣ (Recharge) ಹಾಗೂ ಮರುಬಳಕೆ (Reuse) ಅತೀ ಪ್ರಾಮುಖ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೇಂದ್ರದ ಜಲ ಶಕ್ತಿ ಮಂತ್ರಾಲಯವು ಜಲ ಶಕ್ತಿ ಅಭಿಯಾನವನ್ನು 01 ಜುಲೈ, 2019 ರಿಂದ ಜಾರಿಗೆ ತಂದಿದ್ದು, ಈ ಸಂಬಂಧ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಮತ್ತು ವಸತಿ ಮಂತ್ರಾಲಯವು ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿ "ಜಲ ಶಕ್ತಿ ಅಭಿಯಾನ" ಹಮ್ಮಿಕೊಳ್ಳಲು ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ.

ನೀರಿನ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ಮನಗಂಡು, ರಾಜ್ಯ ಸರ್ಕಾರವು 2019ನೇ ವರ್ಷವನ್ನು "ನೀರಿನ ವರ್ಷವಾಗಿ" ಘೋಷಿಸಿ, "ಜಲಾಮೃತ" ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯಡಿ ಬರ ನಿರೋಧಕ ಕ್ರಮಗಳು, ನೀರಿನ ಮೂಲಗಳ ರಕ್ಷಣೆ ಮತ್ತು ಪುನಶ್ಚೇತನದ ಗುರಿಯನ್ನು 5 ವಿಭಾಗಗಳಲ್ಲಿ ಕೆರೆಗಳ ಪುನಶ್ಚೇತನ, ಮಳೆ ನೀರು ಕೊಯ್ಲು, ನೀರಿನ ಪೋಲು ನಿಯಂತ್ರಣ, ನಗರ ಹಸಿರೀಕರಣ ಮತ್ತು ಸಂಸ್ಕರಿಸಿದ ಕೊಳಚೆ ನೀರಿನ ಮರು ಬಳಕೆ ಮೂಲಕ ಅನುಷ್ಠಾನಗೊಳಸಲು ನಿರ್ಧರಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಈಗಾಗಲೇ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ಜಲ ಶಕ್ತಿ ಅಭಿಯಾನ"ವನ್ನು ಅನುಷ್ಠಾನಗೊಳಸಲು ಸರ್ಕಾರದಿಂದ ಉಲ್ಲೇಖ(1)ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ: 22-07-2019ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಜಲಾಮೃತ ಯೋಜನೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರತೀ ನಗರಾಭಿವೃದ್ಧಿ ಪ್ರಾಧಿಕಾರಗಳು/ಯೋಜನಾ ಪ್ರಾಧಿಕಾರಗಳು ನಗರ ವ್ಯಾಪ್ತಿಯಲ್ಲಿರುವ ನೀರಿನ ಮೂಲಗಳನ್ನು ಅಭಿವೃದ್ಧಿಪಡಿಸಲು ಸೂಚಿಸಿರುತ್ತಾರೆ.

ಆದುದರಿಂದ, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು/ಯೋಜನಾ ಪ್ರಾಧಿಕಾರಗಳು, ತಮ್ಮ ಜಿಲ್ಲೆಯಲ್ಲಿರುವ ಪ್ರಾಚೀನ ಮತ್ತು ಪ್ರಮುಖವಾದ ಕೆರೆ, ಕೊಳ, ಪುಷ್ಕರಣಿಯನ್ನು ಜೀರ್ಣೋದ್ಧಾರ ಅಥವಾ ಪುನಶ್ಚೇತಗೊಳಸಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸಲು ಸೂಚಿಸಿದೆ.

1. ಪ್ರಾಚೀನ ಕಾಲದಿಂದಲೂ ಕೆರೆ, ಕೊಳ, ಪುಷ್ಕರಣಿ, ಭಾವಿ ಜನರ ಎಲ್ಲಾ ನೀರಿನ ಬೇಡಿಕೆಗಳನ್ನು ನೀಗಿಸುತ್ತಿದ್ದು, ಪ್ರಸಕ್ತ ಕಾಲಗಟ್ಟದಲ್ಲಿ ಈ ನೀರಿನ ಮೂಲಗಳು ವಿವಿದ ಕಾರಣಗಳಂದ ಬಳಕೆಗೆ ಯೋಗ್ಯವಿಲ್ಲದಾಗಿರುತ್ತವೆ. ಈ ಮೂಲಗಳನ್ನು ಪುನರುಜ್ಜೇತನಗೊಳಸಿದಲ್ಲಿ, ಬಳಕೆಗೆ ನೀರು ಸಿಗುವುದಲ್ಲದೆ, ಅಂತರ್ಜಲ ಮಟ್ಟ ಏರಿಕೆಗೆ ಸಹಾಯಕಾರಿಯಾಗಲಿದೆ.
2. ಪ್ರತೀ ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರವು ಜಿಲ್ಲಾಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸಮನ್ವಯದೊಂದಿಗೆ ಹಂತ ಹಂತವಾಗಿ ನಗರ ವ್ಯಾಪ್ತಿಯಲ್ಲಿರುವ ನೀರಿನ ಮೂಲವನ್ನು ಪುನಶ್ಚೇತನಗೊಳಸಲು ಕ್ರಮವಹಿಸುವುದು.

3. ಹಾಳಾಗಿರುವ ನೀರಿನ ಮೂಲವನ್ನು ಜೈವಿಕ ಪರಿಹಾರಾತ್ಮಕ ವಿಧಾನ (ಬಯೋ-ರೆಮಿಡಿಯೇಷನ್), ಊಳು ತೆಗೆಯುವುದು, ಏರೇಷನ್, ನೀರಿನಲ್ಲಿ ಬೆಳೆದ ಸಸ್ಯ ಪ್ರಬೇದಗಳನ್ನು ತೆರವುಗೊಳಿಸುವುದು ಹಾಗೂ ಇನ್ನಿತರೇ ಸ್ಥಳೀಯವಾಗಿ ಅನ್ವಯಿಸುವ ತಂತ್ರಜ್ಞಾನವನ್ನು ಬಳಸಿ ಸ್ವಚ್ಛಗೊಳಿಸುವುದು.
4. ನೀರಿನ ಮೂಲಗಳು ಅತಿಕ್ರಮಣವಾಗದಂತೆ ತಡೆಗಟ್ಟಲು ಬೇಲಿಯನ್ನು ನಿರ್ಮಿಸುವುದು. ನೀರಿನ ಮೂಲಗಳ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳನ್ನು (Inlet & Outlet) ಬಲಗೊಳಿಸುವುದು.
5. ನೀರಿನ ಮೂಲಗಳಿಗೆ ಚರಂಡಿ/ಕೊಳಚೆ ನೀರು ಸೇರದಂತೆ ಕ್ರಮವಹಿಸುವುದು.
6. ನೀರಿನ ಮೂಲಗಳ ಜಲಾನಯನ ಪ್ರದೇಶಗಳನ್ನು ಗಿಡ ನೆಡುವುದು, ಮಳೆ ನೀರು ಕಾಲುವೆಗಳ ಸೂಕ್ತ ನಿರ್ವಹಣೆ, ಊಳು ತಡೆ ಕಾರ್ಯಗಳ ಮೂಲಕ ಉತ್ತಮಪಡಿಸುವುದು.
7. ನೀರಿನ ಮೂಲಗಳ ಬಳಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡುವುದು.
8. ಪ್ರತಿ ನೀರಿನ ಮೂಲಗಳನ್ನು ಜಿಯೋ-ಟ್ಯಾಗ್ ಆಧಾರಿತ ಪೋಟೋಗಳ ದಾಖಲೀಕರಣ ಮಾಡುವುದು.
9. ನೀರಿನ ಸಂರಕ್ಷಣೆಗಾಗಿ ಹಮ್ಮಿಕೊಳ್ಳುವ ಮೇಲ್ಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಎನ್.ಎಸ್.ಎಸ್, ಸ್ಕೌಟ್-ಗೈಡ್ಸ್, ರೆಡ್‌ಕ್ರಾಸ್, ಎನ್.ಸಿ.ಸಿ ಇತ್ಯಾದಿ ವಿದ್ಯಾರ್ಥಿ ಸಮೂಹಗಳು, ಸಮುದಾಯ ಕ್ಷೇಮಾಭಿವೃದ್ಧಿ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು, ಚುನಾಯಿತ ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು, ಪರಿಸರಾಸಕ್ತರು, ಎಲ್ಲಾ ಇಲಾಖೆಯ ನೌಕರರು, ವಾಣಿಜ್ಯೋದ್ಯಮಿಗಳನ್ನೊಳಗೊಂಡ ಜಾಗೃತಿ ಕಾರ್ಯಕ್ರಮಗಳನ್ನು ವಿವಿಧ ಮಾಧ್ಯಮಗಳು ಮತ್ತು ಮಾದರಿಗಳಲ್ಲಿ ಹಮ್ಮಿಕೊಳ್ಳುವುದು (ಮನೆ ಮನೆ ಭೇಟಿ, ಸಮುದಾಯ ಕಾರ್ಯಕ್ರಮಗಳು, ಕಾರ್ಯಾಗಾರಗಳು, ಕರಪತ್ರ ವಿತರಣೆ, ಭಿತ್ತಿ ಪತ್ರಗಳು, ಗೋಡೆ ಬರಹ, ಬೀದಿ ನಾಟಕ, ಸೋಷಿಯಲ್ ಮೀಡಿಯ ಇತ್ಯಾದಿ ಮೂಲಕ).
10. ಪ್ರಾಧಿಕಾರಗಳು, ತಾವು ಕೈಗೊಳ್ಳುವ ಕಾರ್ಯಕ್ರಮಗಳ ಕುರಿತು ಪ್ರಸಕ್ತ ಹಂತದ/ಕಾರ್ಯಕ್ರಮ ಮೊದಲ ಸ್ಥಿತಿ ಹಾಗೂ ನಿರಂತರವಾಗಿ ಕೈಗೊಂಡ ಕ್ರಮಗಳು ಮತ್ತು ಅನುಷ್ಠಾನದ ನಂತರದ ಸ್ಥಿತಿ-ಗತಿಗಳನ್ನು ದಾಖಲೀಕರಿಸುವುದು.
11. ಸದರಿ ಕಾರ್ಯಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18(1ಎ) ರಡಿ ಪಾವತಿಸಿಕೊಳ್ಳಲಾಗುವ ಕೆರೆ ಪುನರುಜ್ಜೀವನ ಶುಲ್ಕದಿಂದ ಹಾಗೂ ಉಲ್ಲೇಖ (2) ರಲ್ಲಿನ ಮಾರ್ಗಸೂಚಿಯನ್ವಯ ಭರಿಸುವುದು.

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)

ಸರ್ಕಾರದ ಅಧೀನ ಕಾರ್ಯದರ್ಶಿ (ಯೋ.ಮೇ.ಕೋ)

ನಗರಾಭಿವೃದ್ಧಿ ಇಲಾಖೆ

*ಹೆಚ್ಚುವರಿ ಮಾಹಿತಿಗಾಗಿ:*

1. ಕೇಂದ್ರದ ನಗರಾಭಿವೃದ್ಧಿ ಮತ್ತು ವಸತಿ ಮಂತ್ರಾಲಯವು ಸಿದ್ಧಪಡಿಸಿರುವ "ಜಲ ಶಕ್ತಿ ಅಭಿಯಾನ" ಮಾರ್ಗಸೂಚಿಯು http://mohua.gov.in/cms/jalshaktiabhiyan.php ಜಾಲತಾಣದಲ್ಲಿ ಲಭ್ಯವಿದ್ದು, ಪರಿಶೀಲಿಸಬಹುದಾಗಿದೆ.

*ಲಗತ್ತುಗಳು:*

ಉಲ್ಲೇಖಿತ ಸುತ್ತೋಲೆಗಳ ಪ್ರತಿ

4....

ಸಂಖ್ಯೆ: ನಗ್ರಾಯೋ:ಜಂನಿ:10:CIRC:2019–20
ಸರ್ಕಾರದ ಪತ್ರ ಸಂಖ್ಯೆ:ನಅಇ 200 ಸಿಎಸ್ಎಸ್ 2019,
ಬೆಂಗಳೂರು, ದಿನಾಂಕ:31–07–2019.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ:

<u>ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.</u>

1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ ಕಲಬುರಗಿ.
4. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
5. ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
6. ಮುಖ್ಯಾಧಿಕಾರಿಗಳು/ಆಯುಕ್ತರು, ಪುರಸಭೆ/ನಗರಸಭೆ ಯೋಜನಾ ಪ್ರಾಧಿಕಾರಗಳು.
7. ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
8. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ.
9. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ.
10. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ತಾಂತ್ರಿಕ ವಿಭಾಗದ ಇ–ಮೇಲ್ ವಿಷಯ ನಿರ್ವಾಹಕರಿಗೆ.
11. ಹೆಚ್ಚುವರಿ ಪ್ರತಿಗಳು.

22/08/19

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ

11 NK(Suma)Circ

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 200 ಸಿಎಸ್ಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ

ವಿಕಾಸ ಸೌಧ

ಬೆಂಗಳೂರು, ದಿನಾಂಕ:22.07.2019

:: **ಸುತ್ತೋಲೆ** ::

**ವಿಷಯ: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ಜಲ ಶಕ್ತಿ ಅಭಿಯಾನ" ಅನುಷ್ಠಾನಗೊಳಿಸುವ ಬಗ್ಗೆ.**

********

ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2015ರಲ್ಲಿ ಒಪ್ಪಿಗೆ ಸೂಚಿಸಿ, ಜಾರಿಗೆ ಬಂದಿರುವ ಸುಸ್ಥಿರ ಅಭಿವೃದ್ಧಿ ಗುರಿಗಳ (ಗುರಿ-6: ಸ್ವಚ್ಛ ನೀರು ಹಾಗೂ ನೈರ್ಮಲ್ಯ) ಅನ್ವಯ ಸುಸ್ಥಿರ ನೀರಿನ ನಿರ್ವಹಣೆಯೊಂದಿಗೆ, ಎಲ್ಲರಿಗೂ ನೀರಿನ ವ್ಯವಸ್ಥೆಯನ್ನು 2030ರ ಒಳಗಾಗಿ ಒದಗಿಸುವ ಗುರಿ ಹೊಂದಲಾಗಿರುತ್ತದೆ. ಭಾರತ ದೇಶವು ಪ್ರಪಂಚದ ಶೇ. 17 ಜನಸಂಖ್ಯೆ ಹಾಗೂ ಶೇ. 4 ಸಿಹಿ ನೀರಿನ ಮೂಲ ಹೊಂದಿದ್ದು, ಇವುಗಳಲ್ಲಿನ ವ್ಯತ್ಯಾಸದ ನಿರ್ವಹಣೆ ಸವಾಲಾಗಿರುತ್ತಡೆ. ಪ್ರಸ್ತುತ, ಭಾರತವು ನೀರು ಕ್ಷೇಶಿತ ದೇಶವಾಗಿ (Water Stressed Nation) ಗುರುತಿಸಲಾಗಿದ್ದು, ದೇಶದಲ್ಲಿ ಶೇ. 10 ರಷ್ಟು ಮಳೆ ನೀರನ್ನು ಮಾತ್ರ ಸಂಗ್ರಹಿಸಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಅಸಮಾನ ನೀರಿನ ಬಳಕೆ, ಅಪರಿಮಿತ ಅಂತರ್ಜಲದ ಬಳಕೆ, ಕಳೆದ ಕೆಲ ವರ್ಷಗಳಿಂದ ಮಾನ್ಸೂನ್ ಮಳೆ ಕೊರತೆ ಇವುಗಳಿಂದ ನೀರಿನ ಬೇಡಿಕೆ ಮತ್ತು ಬಳಕೆಯಲ್ಲಿನ ವ್ಯತ್ಯಾಸವು ನಿರ್ಣಾಯಕ ಹಂತವನ್ನು ತಲುಪಿದೆ. ನೀತಿ ಆಯೋಗದ ವರದಿಯನ್ವಯ ದೇಶದ ಶೇ. 50 ರಷ್ಟು ಜನ ನೀರಿನ ಕೊರತೆಯನ್ನು ಅನುಭವಿಸುತ್ತಿರುತ್ತಾರೆ.

ಮೇಲ್ಕಂಡ ಹಿನ್ನಲೆಯಲ್ಲಿ, ನೀರಿನ ಕೊರತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ನೀರಿನ ಸಂರಕ್ಷಣೆ (Conservation), ಪುನಃಶ್ಚೇತನ (Restoration), ಮರುಪೂರಣ (Recharge) ಹಾಗೂ ಮರುಬಳಕೆ (Reuse) ಅತೀ ಪ್ರಾಮುಖ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೇಂದ್ರದ ಜಲ ಶಕ್ತಿ ಮಂತ್ರಾಲಯವು ಜಲ ಶಕ್ತಿ ಅಭಿಯಾನವನ್ನು 01 ಜುಲೈ, 2019 ರಿಂದ ಜಾರಿಗೆ ತಂದಿದ್ದು, ಈ ಸಂಬಂಧ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಮತ್ತು ವಸತಿ ಮಂತ್ರಾಲಯವು ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿ "ಜಲ ಶಕ್ತಿ ಅಭಿಯಾನ" ಹಮ್ಮಿಕೊಳ್ಳಲು ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ.

ಜಲ ಶಕ್ತಿ ಅಭಿಯಾನದಡಿಯಲ್ಲಿ ಈ ಕೆಳಕಂಡ ಕೇಂದ್ರಿತ ಪ್ರದೇಶಗಳನ್ನು (Thrust Area) ಗುರುತಿಸಿರುತ್ತದೆ:

1. ಮಳೆ ನೀರು ಕೊಯ್ಲು
2. ಸಂಸ್ಕರಿಸಿದ ಕೊಳಚೆ ನೀರಿನ ಮರುಬಳಕೆ
3. ನೀರಿನ ಮೂಲಗಳ ಜೀರ್ಣೋದ್ಧಾರ/ಪುನಃಶ್ಚೇತನ
4. ಹಸಿರೀಕರಣ/ಗಿಡ ನೆಡುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ಜಲ ಶಕ್ತಿ ಅಭಿಯಾನ"ವನ್ನು 01 ಅಕ್ಟೋಬರ್, 2019 ರಿಂದ 30 ನವೆಂಬರ್ 2019 ಅವಧಿಯಲ್ಲಿ ತೀಕ್ಷ್ಣವಾಗಿ ಹಾಗೂ ನಂತರ ನಿರಂತರವಾಗಿ ಹಮ್ಮಿಕೊಳ್ಳಲು ಈ ಮೂಲಕ ಆದೇಶಿಸಿದೆ. ಈ ಅಭಿಯಾನವನ್ನು ಅಗತ್ಯವಿರುವ ಎಲ್ಲಾ ಪೂರ್ವ ತಯಾರಿಯೊಂದಿಗೆ ಅನುಷ್ಠಾನಗೊಳಸುವುದು ಹಾಗೂ ಕೆಳಕಂಡ ನಿರ್ದೇಶನಗಳನ್ನು ಪಾಲಿಸಲು ಸೂಚಿಸಿದೆ.

<u>ಅ. ಮಳೆ ನೀರು ಕೊಯ್ಲು :</u>

1. ಈಗಾಗಲೇ ಸರ್ಕಾರವು ರಚಿಸಿರುವ ಕರ್ನಾಟಕ ಮುನಿಸಿಪಾಲಿಟಿ ಮಾದರಿ ಕಟ್ಟಡಗಳ ಉಪವಿಧಿಗಳು-2017 ಹಾಗೂ ಕರ್ನಾಟಕ ಕಾರ್ಪೋರೇಷನ್ ಮಾದರಿ ಕಟ್ಟಡಗಳ ಉಪವಿಧಿಗಳು-2017 ಗಳ ಉಪವಿಧಿ 10.1ರ ಅನ್ವಯ 100 ಚ. ಮೀ ಮೇಲ್ಪಟ್ಟ ಎಲ್ಲಾ ಕಟ್ಟಡ ನಿರ್ಮಾಣಕ್ಕೆ ಕಟ್ಟಡ ಯೋಜನೆಗೆ ಅನುಮತಿಗೆ ಮಳೆ ನೀರು ಕೊಯ್ಲು ಕಡ್ಡಾಯಗೊಳಸಲಾಗಿದ್ದು, ಅನುಷ್ಠಾನಗೊಳಸಲು ಕ್ರಮವಹಿಸುವುದು. ಈ ಮೂಲಕ ಇನ್ನು ಮುಂದೆ ನಿರ್ಮಾಣವಾಗುವ ಎಲ್ಲಾ ಹೊಸ ಕಟ್ಟಡಗಳಲ್ಲಿ ಮಳೆ ನೀರು ಕೋಯ್ಲು ಕಡ್ಡಾಯಗೊಳಸುವುದು.
2. ಪ್ರತೀ ನಗರ ಸ್ಥಳೀಯ ಸಂಸ್ಥೆಯು "ಮಳೆ ನೀರು ಕೊಯ್ಲು ಕೋಶ"ವನ್ನು ಸ್ಥಾಪಿಸುವುದು. ಕೋಶವು ಮಳೆ ನೀರು ಕೊಯ್ಲು ಕಾರ್ಯವನ್ನು ಪರಿಣಾಮಕಾರಿ ಅನುಷ್ಠಾನ ಹಾಗೂ ಅಂತರ್ಜಲ ಬಳಕೆ ಮತ್ತು ಮರುಪೂರಣಗಳ ಕಾರ್ಯಗಳ ಮೇಲ್ವಿಚಾರಣೆ ನಡೆಸುವುದು.
3. ನಗರ ಸ್ಥಳೀಯ ಸಂಸ್ಥೆಗಳು ಎಲ್ಲಾ ಸರ್ಕಾರಿ ಕಟ್ಟಡಗಳು(ಆಡಳತ ಕಛೇರಿಗಳು, ಶೈಕ್ಷಣಿಕ ಸಂಸ್ಥೆಗಳು, ವಾಣಿಜ್ಯ ಸಂಕೀರ್ಣ, ಆಸ್ಪತ್ರೆ ಇತ್ಯಾದಿ), ವಾಣಿಜ್ಯ ಸಂಕೀರ್ಣ ಹಾಗೂ ಸಮೂಹ ಗೃಹಗಳು/ಅಪಾರ್ಟ್‌ಮೆಂಟ್‌ಗಳಲ್ಲಿ ಮಳೆ ನೀರು ಕೊಯ್ಲು ಯೋಜನೆ ಅನುಷ್ಠಾನವಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು. ನಿರ್ಮಾಣಗೊಂಡು ನಾದುರಸ್ತಾಗಿರುವ ಮಳೆ ನೀರು ಕೋಯ್ಲುಗಳನ್ನು ಸರಿಪಡಿಸಲು ವಿಶೇಷ ಡ್ರೈವ್ ಹಮ್ಮಿಕೊಳ್ಳುವುದು.
4. ಸಾರ್ವಜನಿಕ ಪ್ರದೇಶಗಳಾದ ರಸ್ತೆ ಬದಿ ಹಾಗೂ ಉದ್ಯಾನವನಗಳಲ್ಲಿ ಕಾಂಕ್ರೀಟ್‌ನಿಂದ ನಿರ್ಮಾಣ ಮಾಡಲಾದ ಪಾದಚಾರಿ ಮಾರ್ಗಗಳಲ್ಲಿರುವ ಮರ-ಗಿಡಗಳ ಬುಡದ ಸುತ್ತ ಕಾಂಕ್ರೀಟನ್ನು ತೆರವುಗೊಳಸುವುದು ಹಾಗೂ ಕಾಂಟ್ರೀಟ್ ಬ್ಲಾಕ್‌ಗಳ ಬದಲು ರಂಧ್ರಿತ ಪೇವರ್ ಬ್ಲಾಕ್‌ಗಳನ್ನು (Perforated) ಬಳಸುವುದು.

<u>ಆ. ಸಂಸ್ಕರಿಸಿದ ಕೊಳಚೆ ನೀರಿನ ಮರುಬಳಕೆ :</u>

1. ರಾಷ್ಟ್ರೀಯ ನಗರ ನೈರ್ಮಲ್ಯ ನೀತಿಯು ಕನಿಷ್ಠ ಶೇ. 20 ರಷ್ಟು ಸಂಸ್ಕರಿಸಿದ ಕೊಳಚೆ ನೀರಿನ ಪುನರ್ ಬಳಕೆನ್ನು ಆಧ್ಯಾದೇಶಿಸಿದೆ.
2. ರಾಜ್ಯ ಸರ್ಕಾರವು ನಡವಳ ಸಂಖ್ಯೆ: ನಅಇ 435 ಪಿಆರ್‌ಜೆ 2014, ದಿನಾಂಕ:27-12-2017ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ (ವರ್ಗ-1 & ವರ್ಗ-2[67 ನಗರಗಳು]) ತ್ಯಾಜ್ಯ ನೀರಿನ ಮರು ಬಳಕೆ ಕಾರ್ಯನೀತಿಗೆ ಅನುಮೋದನೆ ನೀಡಿರುತ್ತದೆ. ಕಾರ್ಯನೀತಿಯನ್ವಯ 2020 ರೊಳಗಾಗಿ ರಾಜ್ಯದ 10 ಪ್ರಮುಖ ನಗರಗಳು ಹಾಗೂ 2030 ಅವಧಿಗೆ ಎಲ್ಲಾ ಪ್ರಮುಖ ನಗರ/ಪಟ್ಟಣಗಳಲ್ಲಿ ಈ ನೀತಿಯನ್ನು ಜಾರಿಗೊಳಸುವ ಹಾಗೂ 2020 ರೊಳಗಾಗಿ ಶೇ. 20 ರಷ್ಟು ಹಾಗೂ 2030ರ ಅವಧಿಗೆ ಶೇ. 50 ರಷ್ಟು ಸಂಸ್ಕರಿಸಿದ ಕೊಳಚೆ ನೀರನ್ನು ಮರುಬಳಕೆ ಮಾಡುವ ಗುರಿ ನಿಗಧಿಪಡಿಸಲಾಗಿದೆ.

3. ಸರ್ಕಾರದ ನಡವಳಿ ಹಾಗೂ ಕಾರ್ಯನೀತಿಯ ಅನ್ವಯ ನಗರ ಸ್ಥಳೀಯ ಸಂಸ್ಥೆಗಳು ಸಂಸ್ಕರಿಸಿದ ಕೊಳಚೆ ನೀರಿನ ಮರುಬಳಕೆಗೆ ಅಗತ್ಯ ಅಗತ್ಯ ಎಲ್ಲಾ ಕ್ರಮಗಳ ಕೈಗೊಳ್ಳುವುದು.
4. ನಗರ ಸ್ಥಳೀಯ ಸಂಸ್ಥೆಯು ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಹೊಂದಿದ್ದಲ್ಲಿ, ಸಂಸ್ಕರಿಸಿದ ನೀರನ್ನು ಕೃಷಿ–ತೋಟಗಾರಿಕೆ, ಅಗ್ನಿಶಾಮಕ, ದೊಡ್ಡ ಪ್ರಮಾಣದ ನಿರ್ಮಾಣ ಕಾಮಗಾರಿಗಳು (ಸರ್ಕಾರಿ/ಖಾಸಗಿ), ಕೈಗಾರಿಕೆಗಳ ಬಳಕೆಗೆ ಉತ್ತೇಜನ ನೀಡುವುದು.
5. ಕೇಂದ್ರದ ಇಂಧನ ಮಂತ್ರಾಲಯವು 28 ಜನವರಿ 2016ರಲ್ಲಿ ಜಾರಿಗೆ ತಂದಿರುವ Tariff Policy Circular ಅನ್ವಯ ಕೊಳಚೆ ನೀರು ಸಂಸ್ಕರಣಾ ಘಟಕದಿಂದ 50 ಕಿ. ಮೀ. ದೂರದಲ್ಲಿರುವ ಉಷ್ಣ ವಿದ್ಯುತ್ ಸ್ಥಾವರಗಳು ಸಂಸ್ಕರಿಸಿದ ಕೊಳಚೆ ನೀರಿನ ಬಳಕೆಗೆ ಸೂಚಿಸಿದ್ದು, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

ಇ. ನೀರಿನ ಮೂಲಗಳ ಜೀರ್ಣೋದ್ಧಾರ/ಪುನಃಶ್ಚೇತನ :

1. ಪ್ರಾಚೀನ ಕಾಲದಿಂದಲೂ ಕೆರೆ, ಕೊಳ, ಪುಷ್ಕರಣಿ, ಭಾವಿ ಜನರ ಎಲ್ಲಾ ನೀರಿನ ಬೇಡಿಕೆಗಳನ್ನು ನೀಗಿಸುತ್ತಿದ್ದು, ಪ್ರಸಕ್ತ ಕಾಲಗಟ್ಟದಲ್ಲಿ ಈ ನೀರಿನ ಮೂಲಗಳು ವಿವಿಧ ಕಾರಣಗಳಿಂದ ಬಳಕೆಗೆ ಯೋಗ್ಯವಿಲ್ಲದಾಗಿರುತ್ತವೆ. ಈ ಮೂಲಗಳನ್ನು ಪುನರುಜ್ಜೀವನಗೊಳಿಸಿದಲ್ಲಿ, ಬಳಕೆಗೆ ನೀರು ಸಿಗುವುದಲ್ಲದೆ, ಅಂತರ್ಜಲ ಮಟ್ಟ ಏರಿಕೆಗೆ ಸಹಾಯಕಾರಿಯಾಗದೆ.
2. ಪ್ರತೀ ನಗರ ಸ್ಥಳೀಯ ಸಂಸ್ಥೆಯು ಈ ಅಭಿಯಾನದ ಅವಧಿಯಲ್ಲಿ ಕನಿಷ್ಠ ಒಂದು ನೀರಿನ ಮೂಲವನ್ನು ಪುನಃಶ್ಚೇತನಗೊಳಿಸಲು ಕ್ರಮವಹಿಸುವುದು.
3. ಹಾಳಾಗಿರುವ ನೀರಿನ ಮೂಲವನ್ನು ಜೈವಿಕ ಪರಿಹಾರಾತ್ಮಕ ವಿಧಾನ (ಬಯೋ–ರೆಮಿಡಿಯೇಷನ್), ಊಳು ತೆಗೆಯುವುದು, ಏರೇಷನ್, ನೀರಿನಲ್ಲಿ ಬೆಳೆದ ಸಸ್ಯ ಪ್ರಭೇದಗಳನ್ನು ತೆರವುಗೊಳಿಸುವುದು ಹಾಗೂ ಇನ್ನಿತರೇ ಸ್ಥಳೀಯವಾಗಿ ಅನ್ವಯಿಸುವ ತಂತ್ರಜ್ಞಾನವನ್ನು ಬಳಸಿ ಸ್ವಚ್ಛಗೊಳಿಸುವುದು.
4. ನೀರಿನ ಮೂಲಗಳು ಅತಿಕ್ರಮಣವಾಗದಂತೆ ತಡೆಗಟ್ಟಲು ಬೇಲಿಯನ್ನು ನಿರ್ಮಿಸುವುದು. ನೀರಿನ ಮೂಲಗಳ ಪ್ರವೇಶ ಮತ್ತು ನಿರ್ಗಮನ ಮಾರ್ಗಗಳನ್ನು (Inlet & Outlet) ಬಲಗೊಳಿಸುವುದು.
5. ನೀರಿನ ಮೂಲಗಳಿಗೆ ಚರಂಡಿ/ಕೊಳಚೆ ನೀರು ಸೇರದಂತೆ ಕ್ರಮವಹಿಸುವುದು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗಧಿಪಡಿಸಿರುವ ಮಾನದಂಡಗಳನ್ನು ಪೂರೈಸಿದ ಸಂಸ್ಕರಿಸಿದ ಕೊಳಚೆ ನೀರನ್ನು ಮಾತ್ರ ಬಿಡಲು ಅನುಮತಿ ನೀಡುವುದು.
6. ನೀರಿನ ಮೂಲಗಳ ಜಲಾನಯನ ಪ್ರದೇಶಗಳನ್ನು ಗಿಡ ನೆಡುವುದು, ಮಳೆ ನೀರು ಕಾಲುವೆಗಳ ಸೂಕ್ತ ನಿರ್ವಹಣೆ, ಊಳು ತಡೆ ಕಾರ್ಯಗಳ ಮೂಲಕ ಉತ್ತಮಪಡಿಸುವುದು.
7. ನೀರಿನ ಮೂಲಗಳ ಬಳಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡುವುದು.
8. ಖಾಸಗಿ ಸಹಭಾಗಿತ್ವ/ಸಮುದಾಯ ಆಧಾರಿತ ಸಂಸ್ಥೆಗಳ ಮೂಲಕ ನೀರಿನ ಮೂಲಗಳ ಪುನಃಶ್ಚೇತನ ಮತ್ತು ನಿರ್ವಹಣೆಗೆ ಉತ್ತೇಜನ ನೀಡುವುದು.
9. ನೀರಿನ ಮೂಲಗಳಲ್ಲಿ ಲಭ್ಯವಿರುವ ನೀರನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸುವುದು ಹಾಗೂ ಉತ್ತಮಪಡಿಸಲು ಅಗತ್ಯವಿರುವ ಮೇಲ್ಕಂಡ ಕ್ರಮಗಳನ್ನು ಕೈಗೊಳ್ಳುವುದು.
10. ಪ್ರತಿ ನೀರಿನ ಮೂಲಗಳನ್ನು ಜಿಯೋ–ಟ್ಯಾಗ್ ಆಧಾರಿತ ಫೋಟೊಗಳ ದಾಖಲೀಕರಣ ಮಾಡುವುದು.

ಈ. ಹಸಿರೀಕರಣ/ಗಿಡ ನೆಡುವುದು :

1. ಸರ್ಕಾರವು ನಗರ ಹಸಿರೀಕರಣ ಕಾರ್ಯಕ್ರಮದ ಕುರಿತು ಹೊರಡಿಸಿರುವ ಆದೇಶ ಸಂಖ್ಯೆ: ನಅಇ 172 ಸಿಎಸ್‌ಎಸ್ 2019, ದಿನಾಂಕ:19-07-2019 ರಂತೆ ನಗರ ಹಸಿರೀಕರಣಕ್ಕೆ ಅಗತ್ಯ ಕ್ರಮಕೈಗೊಳ್ಳುವುದು.

ಉ. ಸಾರ್ವಜನಿಕ ಜಾಗೃತಿ :

1. ನೀರಿನ ಸಂರಕ್ಷಣೆ ಕುರಿತು ಸಾರ್ವಜನಿಕ ಜಾಗೃತಿ ಪ್ರಸಕ್ತ ಅವಶ್ಯಕತೆಯಾಗಿದ್ದು, ಜಲ ಶಕ್ತಿ ಅಭಿಯಾನವನ್ನು ಹೆಚ್ಚಿನ ಸಾರ್ವಜನಿಕ ಭಾಗವಹಿಸುವಿಕೆಯ ಉದ್ದೇಶದೊಂದಿಗೆ ವಿನ್ಯಾಸಗೊಳಸಲಾಗಿದೆ. ಸ್ಥಳೀಯ ಸಮುದಾಯಗಳಗೆ ಮಹತ್ವದ ಜವಾಬ್ದಾರಿ ನೀಡುವ ಮೂಲಕ ಹೆಚ್ಚು ಭಾಗವಹಿಸುವಿಕೆಯ ಗುರಿ ಹೊಂದಲಾಗಿದೆ.
2. ಸ್ಥಳೀಯವಾಗಿ ಲಭ್ಯವಿರುವ ನೀರಿನ ಮೂಲಗಳ ನಿರ್ವಹಣೆಯನ್ನು ಸಾಮೂಹಿಕ ಮಾಲಿಕತ್ವದ ಮೂಲಕ ಸಮುದಾಯ ಸಹಭಾಗಿತ್ವಕ್ಕೆ ಉತ್ತೇಜನ ನೀಡುವುದು.
3. ನೀರಿನ ಸಂರಕ್ಷಣೆಗಾಗಿ ಹಮ್ಮಿಕೊಳ್ಳುವ ಮೇಲ್ಕಂಡ ನಾಲ್ಕೂ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಎನ್.ಎಸ್.ಎಸ್, ಸ್ಕೌಟ್-ಗೈಡ್ಸ್, ರೆಡ್‌ಕ್ರಾಸ್, ಎನ್.ಸಿ.ಸಿ ಇತ್ಯಾದಿ ವಿದ್ಯಾರ್ಥಿಸಮೂಹಗಳು, ಸಮುದಾಯ ಕ್ಷೇಮಾಭಿವೃದ್ಧಿ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು, ಚುನಾಯಿತ ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು, ಪರಿಸರಾಸಕ್ತರು, ಎಲ್ಲಾ ಇಲಾಖೆಯ ನೌಕರರು, ವಾಣಿಜ್ಯೋದ್ಯಮಿಗಳನ್ನೊಳಗೊಂಡ ಜಾಗೃತಿ ಕಾರ್ಯಕ್ರಮಗಳನ್ನು ವಿವಿಧ ಮಾಧ್ಯಮಗಳು ಮತ್ತು ಮಾದರಿಗಳಲ್ಲಿ ಹಮ್ಮಿಕೊಳ್ಳುವುದು (ಮನೆ ಮನೆ ಭೇಟಿ, ಸಮುದಾಯ ಕಾರ್ಯಕ್ರಮಗಳು, ಕಾರ್ಯಾಗಾರಗಳು, ಕರಪತ್ರ ವಿತರಣೆ, ಭಿತ್ತಿ ಪತ್ರಗಳು, ಗೋಡೆ ಬರಹ, ಬೀದಿ ನಾಟಕ, ಸೋಷಿಯಲ್ ಮೀಡಿಯ ಇತ್ಯಾದಿ ಮೂಲಕ).
4. ನಗರ ಸ್ಥಳೀಯ ಸಮಸ್ಥೆಗಳು ಮತ್ತು ಜಿಲ್ಲಾ/ರಾಜ್ಯ ಮಟ್ಟದ ಖ್ಯಾತ ಚಿತ್ರ ನಟರು, ಕ್ರೀಡಾಪಟುಗಳು, ಸಾರ್ವಜನಿಕ/ಧಾರ್ಮಿಕ ಕ್ಷೇತ್ರದ ಗಣ್ಯರುಗಳನ್ನು ಅಭಿಯಾನದ ಪ್ರಚಾರ ಕಾರ್ಯದಲ್ಲಿ ಬಳಸಿಕೊಳ್ಳುವುದು.

ಊ. ಆರ್ಥಿಕ ಮೂಲ :

1. ಸದರಿ ಕಾರ್ಯಕ್ರಮ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಹಣಕಾಸು ಆಯೋಗದ ಅನುದಾನ, ರಾಜ್ಯ ಹಣಕಾಸು ಆಯೋಗದ ಅನುದಾನ (ಮುಕ್ತ ನಿಧಿ), ಸ್ಥಳೀಯ ಸಂಸ್ಥೆಯ ಸಾಮಾನ್ಯ ನಿಧಿಗಳಂದ ಭರಿಸುವುದು ಹಾಗೂ ಖಾಸಗಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ (ಸಿ.ಎಸ್.ಆರ್ ಒಳಗೊಂಡಂತೆ) ಕಾರ್ಯಕ್ರಮ ಕೈಗೊಳ್ಳಲು ಪರಿಶೀಲಿಸುವುದು.
2. ಅಮೃತ್ ನಗರಗಳಲ್ಲಿ ಅನುಮೋದಿತ ಎಸ್.ಎ.ಎ.ಪಿ ಯೋಜನೆಗಳಲ್ಲಿ ಉಳಿತಾಯವಾದ ಮೊತ್ತವನ್ನು ಎಸ್.ಹೆಚ್.ಪಿ.ಎಸ್.ಸಿ ಯ ಅನುಮೋದನೆಯೊಂದಿಗೆ ಬಳಕೆ ಮಾಡಿಕೊಳ್ಳಬಹುದು.
3. DAY-NULM ಯೋಜನೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ನೀರಿನ ಮೂಲಗಳ ಬಳ ಸ್ಟ್ರೀಟ್-ವೆಂಡಿಂಗ್ ವಲಯ ಅಭಿವೃದ್ಧಿಪಡಿಸಲು ಬಳಕೆ ಮಾಡಿಕೊಳ್ಳಬಹುದು. ಈ ಮೂಲಕ ನೀರಿನ ಮೂಲಗಳ ರಕ್ಷಣೆ ಮತ್ತು ನಿರ್ವಹಣೆಗೆ ಸಾರ್ವಜನಿಕ ಕಾವಲು ಪಡೆಯನ್ನು ಉತ್ತೇಜಿಸುವುದು.

ಋ. ಕಾರ್ಯಕ್ರಮದ ದಾಖಲೀಕರಣ :

1. ನಗರ ಸ್ಥಳೀಯ ಸಂಸ್ಥೆಗಳು ತಾವು ಕೈಗೊಳ್ಳುವ ಕಾರ್ಯಕ್ರಮಗಳ ಕುರಿತು ಪ್ರಸಕ್ತ ಹಂತದ/ಕಾರ್ಯಕ್ರಮ ಮೊದಲ ಸ್ಥಿತಿ ಹಾಗೂ ನಿರಂತರವಾಗಿ ಕೈಗೊಂಡ ಕ್ರಮಗಳು ಮತ್ತು ಅನುಷ್ಠಾನದ ನಂತರದ ಸ್ಥಿತಿ-ಗತಿಗಳನ್ನು ದಾಖಲೀಕರಿಸುವುದು.
2. ದಾಖಲೀಕರಿಸಿದ ಅಂಶಗಳನ್ನು ಜಲ ಶಕ್ತಿ ಮಂತ್ರಾಲಯದ ಜಾಲತಾಣದಲ್ಲಿ **ಅನುಬಂಧ-1** ರಲ್ಲಿ ಲಗತ್ತಿಸಿರುವ ನಗರ ಸ್ಥಳೀಯ ಸಂಸ್ಥೆಗಳು ಮಾತ್ರ ತಪ್ಪದೆ ಕಾಲೋಚಿತಗೊಳಿಸುವುದು.

**ಮೇಲ್ಕಂಡ ಎಲ್ಲಾ ಅಂಶಗಳ ಅನುಷ್ಠಾನಕ್ಕಾಗಿ ಜಂಟಿ ನಿರ್ದೇಶಕರು (ಅಭಿವೃದ್ಧಿ), ಪೌರಾಡಳಿತ ನಿರ್ದೇಶನಾಲಯ ಇವರನ್ನು ಈಗಾಗಲೇ ಜಲ ಶಕ್ತಿ ಅಭಿಯಾನದ ರಾಜ್ಯ ನೋಡಲ್ ಅಧಿಕಾರಿಗಳಾಗಿ ಸರ್ಕಾರದ ಆದೇಶ ಸಂಖ್ಯೆ:ನಅಇ 191 ಸಿಎಸ್ಎಸ್ 2019, ದಿನಾಂಕ:19-07-2019 ರಲ್ಲಿ ನೇಮಕ ಮಾಡಲಾಗಿದೆ.**

K. Nagesh 22/7/19

(ಕೆ. ನಾಗೇಶ್)

ಸರ್ಕಾರದ ಅಧೀನ ಕಾರ್ಯದರ್ಶಿ (ಯೋ.ಮೇ.ಕೋ) (ಪ್ರ)

ನಗರಾಭಿವೃದ್ಧಿ ಇಲಾಖೆ

ಹೆಚ್ಚುವರಿ ಮಾಹಿತಿಗಾಗಿ:

1. ಕೇಂದ್ರದ ನಗರಾಭಿವೃದ್ಧಿ ಮತ್ತು ವಸತಿ ಮಂತ್ರಾಲಯವು ಸಿದ್ಧಪಡಿಸಿರುವ "**ಜಲ ಶಕ್ತಿ ಅಭಿಯಾನ**" ಮಾರ್ಗಸೂಚಿಯು http://mohua.gov.in/cms/jalshaktiabhiyan.php ಜಾಲತಾಣದಲ್ಲಿ ಲಭ್ಯವಿದ್ದು, ಪರಿಶೀಲಿಸಬಹುದಾಗಿದೆ.
2. ರಾಜ್ಯ ಸರ್ಕಾರ ಹೊರಡಿಸಿರುವ "**ಕರ್ನಾಟಕ ರಾಜ್ಯ ಸಂಸ್ಕರಿಸಿದ ಕೊಳಚೆ ನೀರು ಮರುಬಳಕೆ ಕಾರ್ಯನೀತಿ**"ಯು http://www.uddkar.gov.in/en/node/288 ಜಾಲತಾಣದಲ್ಲಿ ಲಭ್ಯವಿದ್ದು, ಪರಿಶೀಲಿಸಬಹುದಾಗಿದೆ.
3. ಕರ್ನಾಟಕ ಮುನಿಸಿಪಾಲಿಟಿ ಮಾದರಿ ಕಟ್ಟಡಗಳ ಉಪವಿಧಿಗಳು-2017 ಹಾಗೂ ಕರ್ನಾಟಕ ಕಾರ್ಪೋರೇಷನ್ ಮಾದರಿ ಕಟ್ಟಡಗಳ ಉಪವಿಧಿಗಳು-2017ಗಳು http://www.uddkar.gov.in/en/node/288 ಜಾಲತಾಣದಲ್ಲಿ ಲಭ್ಯವಿದ್ದು, ಪರಿಶೀಲಿಸಬಹುದಾಗಿದೆ.

ಲಗತ್ತುಗಳು:

1. **ಅನುಬಂಧ-1:** ಜಲ ಶಕ್ತಿ ಮಂತ್ರಾಲಯದ ಜಾಲತಾಣದಲ್ಲಿ ಅಭಿಯಾನದ ಮಾಹಿತಿಯನ್ನು ಕಾಲೋಚಿತಗೊಳಿಸಬೇಕಾದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ.
2. **ಅನುಬಂಧ-2:** ರಾಜ್ಯ ಸರ್ಕಾರವು ನಡವಳಿ ಸಂಖ್ಯೆ: ನಅಇ 435 ಪಿಆರ್‌ಜೆ 2014, ದಿನಾಂಕ: 27-12-2017ರ ಪ್ರತಿ.
3. **ಅನುಬಂಧ-3:** ಸರ್ಕಾರದ ಆದೇಶ ಸಂಖ್ಯೆ: ನಅಇ 172 ಸಿಎಸ್ಎಸ್ 2019, ದಿನಾಂಕ: 19-07-2019ರ ಪ್ರತಿ.
4. **ಅನುಬಂಧ-4:** ಸರ್ಕಾರದ ಆದೇಶ ಸಂಖ್ಯೆ: ನಅಇ 191 ಸಿಎಸ್ಎಸ್ 2019, ದಿನಾಂಕ: 19-07-2019ರ ಪ್ರತಿ.

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಇಲಾಖೆ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಬೆಂಗಳೂರು.
12. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.
15. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
16. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.
17. ರಾಜ್ಯ ನೋಡಲ್ ಅಧಿಕಾರಿಗಳು, ಜಲಶಕ್ತಿ ಅಭಿಯಾನ ಹಾಗೂ ಜಂಟಿ ನಿರ್ದೇಶಕರು (ಅಭಿವೃದ್ಧಿ), ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
18. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
19. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು – ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
20. ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರು.
21. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳು – ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
22. ನಗರಾಭಿವೃದ್ಧಿ ಇಲಾಖೆ ಅಂತರ್ಜಾಲ.
23. ಇಲಾಖಾ ಪ್ರಕಟಣಾ ಫಲಕ.
24. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 36 ಗುಅಪ್ರಾ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 04.08.2015.

## ಸುತ್ತೋಲೆ

ವಿಷಯ : ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 18(ಎ)ರಡಿಯಲ್ಲಿ ಪಾವತಿಸಿಕೊಳ್ಳುವ "ಕೆರೆ ಸಂರಕ್ಷಣಾ ಶುಲ್ಕ"ವನ್ನು ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿ.

*******

ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ/ಯೋಜನಾ ಪ್ರಾಧಿಕರಗಳಿಗೆ (ಪುರಸಭೆ/ನಗರಸಭೆ ಪ್ರಾಧಿಕಾರಗಳು ಸೇರಿದಂತೆ) ಅನ್ವಯಿಸುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಪ್ರಾಧಿಕಾರಗಳು ಅನುಮೋದಿಸುವ ವಿನ್ಯಾಸಗಳಿಗೆ ಸಂಬಂಧಿಸಿದಂತೆ ಕೆರೆ ಸಂರಕ್ಷಣಾ ಶುಲ್ಕವನ್ನು (Tank Rejuvenation fee) ಪ್ರತಿ ಎಕರೆಗೆ ರೂ. 1.00 ಲಕ್ಷದಂತೆ ಪಾವತಿಸಿಕೊಳ್ಳುವ ಬಗ್ಗೆ ದಿನಾಂಕ 03-10-2009 ರಿಂದ ಅನ್ವಯವಾಗುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಗೆ ಜಾರಿಗೆ ಬರುವಂತೆ ತಿದ್ದುಪಡಿ ತರಲಾಗಿರುತ್ತದೆ. ಕಾಯ್ದೆಗನುಗುಣವಾಗಿ ಪ್ರಾಧಿಕಾರಗಳು ಸಂಗ್ರಹಿಸಿರುವ "ಕೆರೆ ಸಂರಕ್ಷಣಾ ಶುಲ್ಕ"ದ ಹಣವನ್ನು ವಿನಿಯೋಗಿಸುವ ಕುರಿತು ಅನೇಕ ಸಂದರ್ಭಗಳಲ್ಲಿ ಸರ್ಕಾರದ ಮಾರ್ಗದರ್ಶನ ನೀಡುವಂತೆ ಮನವಿ ಮಾಡಲಾಗಿದ್ದು, ಈ ಹಿನ್ನೆಲೆಯಲ್ಲಿ ಸಂಗ್ರಹಿತ "ಕೆರೆ ಸಂರಕ್ಷಣಾ ಶುಲ್ಕ"ದ ನಿಧಿಯನ್ನು ಈ ಕೆಳಕಂಡ ಸಂದರ್ಭಗಳಿಗನುಗುಣಾವಾಗಿ ಕಾಯ್ದೆಯ ತಿದ್ದುಪಡಿಯ ಮೂಲೋದ್ದೇಶದನ್ವಯ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿನ ಕೆರೆ-ಕೊಳ್ಳಗಳ ಮನರುಜ್ಜೀವನಕ್ಕಾಗಿ ಸರ್ಕಾರದ ಪೂರ್ವಾನುಮತಿಯೊಂದಿಗೆ ವಿನಿಯೋಗಿಸಿ ಕೊಳ್ಳಬಹುದೆಂದು ತಿಳಿಸಬಯಸಿದೆ.

ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿನ ಕೆರೆಗಳ ಸಂರಕ್ಷಣೆ ಉದ್ದೇಶಕ್ಕೆ ಆಯ್ಕೆ ಮಾಡುವಾಗ ಕೆಳಕಂಡ ಮಾನದಂಡಗಳನ್ನು ಅನುಸರಿಸತಕ್ಕದ್ದು.

1. ಕುಡಿಯುವ ನೀರಿಗೆ ಬಳಸುವ ಕೆರೆಗಳನ್ನು ನೀರಿನ ಒಳಹರಿವು ಮತ್ತು ಹೊರ ಹರಿವು ಆಧರಿಸಿ, ಆದ್ಯತೆಯ ಮೇಲೆ ಗುರುತಿಸತಕ್ಕದ್ದು.
2. ಕೆರೆ ಮಾಲಿಕತ್ವಕ್ಕೆ ಸಂಬಂಧಿಸಿದಂತೆ, ಸಂಬಂಧಿತ ಇಲಾಖೆಯ ಪೂರ್ವಾನುಮತಿ ಪಡೆಯತಕ್ಕದ್ದು.
3. ಕಶ್ಮಲ/ತ್ಯಾಜ್ಯದಿಂದ ಕಲುಷಿತಗೊಂಡ ಕೆರೆಗಳಿದ್ದಲ್ಲಿ ಸದರಿ ಕೆರೆಯ ಲಭ್ಯ ನೀರಿನ ಗರಿಷ್ಠ ಬಳಕೆಗೆ ಅನುಗುಣವಾಗಿ ಆದ್ಯತೆ ನೀಡುವುದು.
4. ಕಂದಾಯ ದಾಖಲಾತಿಗಳನ್ವಯ ಇರುವ ವಿಸ್ತೀರ್ಣಕ್ಕನುಗುಣಾವಾಗಿ ಸಕ್ಷಮ ಪ್ರಾಧಿಕಾರದಿಂದ ಗಡಿ ಗುರುತಿಸಿಕೊಂಡು, ಯಾವುದೇ ಒತ್ತುವರಿಗಳಾಗಿದ್ದಲ್ಲಿ ಪ್ರತಿ ಬಂಧಿಸುವುದು ಮತ್ತು ತೆರವುಗೊಳಿಸುವುದು ಸೇರಿದಂತೆ ಕ್ರಮವಹಿಸಿ ಸಂರಕ್ಷಣೆಗೆ ಪರಿಗಣಿಸತಕ್ಕದ್ದು.
5. ಆಯ್ಕೆ ಮಾಡಿದ ಕೆರೆಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ (ಉದಾ:ತಡೆಬೇಲಿ, ಒತ್ತುವರಿ ತೆರವುಗೊಳಿಸುವಿಕೆ, ಹೂಳು ತೆಗೆಯುವುದು ಮತ್ತು ಸಂಗ್ರಹಣೆ ಕಡಮೆಗೊಳಿಸುವ ನಿಟ್ಟಿನಲ್ಲಿ ಅಂತರ್ ಜಲವನ್ನು ಮರು ಪೂರಣಗೊಳಿಸಲು ಅಗತ್ಯ ಗಿಡ ಮರಗಳ ಬೆಳಸುವಿಕೆ, ಕೆರೆ ನೀರಿನ ಶುದ್ದೀಕರಣ, ನೀರಿನ ಗುಣಮಟ್ಟವನ್ನು ಸುಧಾರಿಸುವುದು, ವಾಯುವಿಹಾರಕ್ಕೆ ಬಳಸಿದಲ್ಲಿ ಅದಕ್ಕನುಗುಣಾವಾಗಿ, ಅಥಾವಾ ಪ್ರವಾಸೋದ್ಯಮ ಉದ್ದೇಶಕ್ಕಾಗಿ ಇತ್ಯಾದಿ...).

-2..

6. ಪುನರುಜ್ಜೀವನ ಕೆಲಸಾಕ್ಕಾಗಿ ಆಯ್ಕೆ ಮಾಡಿರುವ ಕೆರೆಗೆ ಸಂಬಂಧಿಸಿದಂತೆ ಆದ್ಯತೆ ಮೇಲೆ ಗುರುತಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿ (DPR) ಸಿದ್ಧಪಡಿಸುವುದು.
7. ಸಂಗ್ರಹವಾಗಿರುವ ನಿಧಿಯಲ್ಲಿ ಲಭ್ಯವಿರುವ ಹಣಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಗುರುತಿಸಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವುದು.

ಮೇಲೆ ವಿವರಿಸಿರುವ ಮಾನದಂಡಗಳಿಗನುಗುಣವಾಗಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಾಧಿಕಾರ ಆಯ್ಕೆ ಮಾಡುವ ಕೆರೆಯ ಸಂರಕ್ಷಣೆಗನುಗುಣವಾಗಿ ಸಿದ್ಧಪಡಿಸಲಾದ ವಿಸ್ತೃತ ಯೋಜನಾ ವರದಿಯೊಂದಿಗೆ ಪೂರಕ ದಾಖಲಾತಿಗಳು ಒಳಗೊಂಡಂತೆ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಹಮತ/ಮೇಲುರುಜುವಿನೊಂದಿಗೆ ಸರ್ಕಾರದ ಪೂರ್ವಾನುಮತಿಗಾಗಿ ಯೋಜನೆಯನ್ನು ಸಲ್ಲಿಸತಕ್ಕದ್ದು.

ಸರ್ಕಾರದ ಅನುಮತಿ ಪಡೆದ ನಂತರವೇ ಉದ್ದೇಶಿತ ಕೆರೆ ಸಂರಕ್ಷಣೆಯ ಕಾಮಗಾರಿಯನ್ನು ನಿಯಮಾನುಸಾರ ಗುತ್ತಿಗೆ ನೀಡುವ ಪೂರ್ವದಲ್ಲಿ ಅನುಸರಿಸಬೇಕಾದ ಎಲ್ಲಾ ಪ್ರಕ್ರಿಯೆಗಳನ್ನು ಚಾಚೂತಪ್ಪದೆ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ವಿ. ರಾಜೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

ಇವರಿಗೆ,

1) ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು.
2) ಎಲ್ಲಾ ಜಿಲ್ಲಾಧಿಕಾರಿಗಳು.
3) ಆಯುಕ್ತರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
4) ಸದಸ್ಯ ಕಾರ್ಯದರ್ಶಿಗಳು, ಎಲ್ಲಾ ನಗರ ಯೋಜನಾ ಪ್ರಾಧಿಕಾರ, ಪುರಸಭೆ/ನಗರಸಭೆ ಯೋಜನಾ ಪ್ರಾಧಿಕಾರಗಳು,
5) ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಎಲ್ಲಾ ಶಾಖಾ ಕಛೇರಿಯ ಎಲ್ಲಾ ಮುಖ್ಯಸ್ಥರು

(3–5: ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು. ಇವರ ಮುಖಾಂತರ)

6) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.